24

# “ನಾನು ನಂಬಿದ್ದೇನೆ”

## (11:1-57)

ಲೇಖಕರ ಟಿಪ್ಪಣಿ: ಈ ಕೆಳಗಿನ ವಿಷಯವು ಪ್ರಸ್ತಾಪಪಡಿಸಲ್ಪಡುವದಕ್ಕಿಂತ ಒಂದು ವಾರ ಮೊದಲು, ಜೇಮಿ ಗೊವೆನ್, ಒಬ್ಬ 23 ವರ್ಷ ವಯಸ್ಸಿನ ಸಭಾ ಸದಸ್ಯನು, ಹಾರ್ಡಿಂಗ್ ಯುನಿವರ್ಸಿಟಿಯ ಬೆನ್ಸನ್ ಆಡಿಟೋರಿಯಮ್‌ದ ಎತ್ತರದ ಮೇಲಿಂದ ಕೆಳಗೆ ಜಾರಿ ಬಿದ್ದನು. ಹೆಚ್ಚು ಮೇಲಕ್ಕೆ ಏರಿ ಹೋಗುತ್ತಿರುವಾಗ, ಅವನ ಕೈಗಳು ಜಾರಿ ತೆಳುವಾದ ಮೇಲ್ಛಾವಣಿಯ ಹೆಂಚುಗಳ ಮುಖಾಂತರ ಅಪ್ಪಳಿಸಲ್ಪಟ್ಟು, ಐವತ್ತು ಅಡಿ ಕೆಳಗೆ ಗಟ್ಟಿಯಾದ ನೆಲದ ಮೇಲೆ ಬಿದ್ದನು. ಈ ಭಯಾನಕವಾದ ಬೀಳುವಿಕೆಯಲ್ಲಿ ಹೆಚ್ಚಾದಗಾಯಗಳಾಗದೇ ಉಳಿದು ಕೊಂಡನು. ಮತ್ತು ಮೂರು ದಿನ ಆಸ್ಪತ್ರೆಯಲ್ಲಿದ್ದ ನಂತರ ಮನೆಗೆ ಹಿಂದಿರುಗಿ ಬಂದನು. ಇಂದು ಅವನು ಪರಿಪೂರ್ಣ ಆರೋಗ್ಯದಲ್ಲಿದ್ದಾನೆ; ಆದರೆ ಅನೇಕ ದಿನಗಳವರೆಗೆ ಆತನ ಭಯಾನಕವಾದ ಅಪಘಾತವು ನಾನು ಪ್ರತಿ ಭಾನುವಾರ ಪ್ರಸಂಗಿಸುವ ಸಭೆಯ ಮೇಲೆ ಆಳವಾದ ಪರಿಣಾಮ ಮಾಡಿತು. ಈ ಪೆಟ್ಟು ಹೊಂದಿದ ವಾರದ ನಂತರ, ಜೇಮಿನು ಜೀವಿತ ಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವ ಮತ್ತು ಒಂದು ವಿಶೇಷವಾದ ರೀತಿಯಲ್ಲಿ ಆತನ ಸ್ತೋತ್ರ ಗಳನ್ನು ಹಾಡುವ ಒಂದು ಆರಾಧನೆಯ ಅಗತ್ಯತೆ ಸಭೆಗಿತ್ತು. ಅದರ ಪರಿಣಾಮವಾಗಿ, ಈ ಧ್ಯಾನದ ರೀತಿಯ ಪ್ರಸಂಗವು ಐದು ಭಾಗಗಳಾಗಿ ವಿಭಾಗಿಸಲ್ಪಟ್ಟು ಈ ಅದ್ಭುತಕರವಾದ ವಾಕ್ಯಭಾಗದಿಂದ ಘೋಷಿಸಲ್ಪಡುವ ಸತ್ಯಗಳನ್ನೊಳಗೊಂಡ ವಿಶೇಷ ಸಂಗತಿಗಳೊಂದಿಗೆ ಕ್ರಮಪಡಿಸಲ್ಪಟ್ಟಿತು.

---

ಪ್ರೀತಿಯು ಯಾವಾಗಲೂ ಪುನಃ ಪ್ರಾರಂಭವಾಗುತ್ತದೆ! ಒಬ್ಬನು ತನ್ನ ತಾಯಿಯ ತೋಳು ಗಳಲ್ಲಿ ಭದ್ರವಾಗಿ ಅಪ್ಪಿಕೊಂಡಿರುವ ಶಿಶುವಿನಂತೆ ಪ್ರೀತಿಯನ್ನು ತಿಳಿದಿದ್ದೇನೆಂದು ಯೋಚಿಸ ಬಹುದು. ಒಬ್ಬ ಯುವತಿಯು ತನ್ನ ಮೊದಲ ದಶಕದ ವಯಸ್ಸಿನಲ್ಲಿ ಪ್ರೀತಿಯನ್ನು ಕಂಡು ಕೊಂಡನೆಂದು ಯೋಚಿಸಬಹುದು. ಒಬ್ಬ ಪುರುಷನು ತಾನು ಮದುವೆಯಾಗಲು ಬಯಸುವ ಸ್ತ್ರೀಯನ್ನು ಕಂಡು ಕೊಂಡಾಗ ತಾನು ಅಂತಿಮ ಪ್ರೀತಿಯನ್ನು ಕಂಡು ಕೊಂಡಿದ್ದೇನೆಂಬ ನಿಶ್ಚಯವುಳ್ಳವನಾಗಿರ ಬಹುದು. ತಂದೆ ತಾಯಿಗಳು ತಮ್ಮ ತೋಳುಗಳಲ್ಲಿ ಅದೇ ಜನಿಸಿದ ಮಗುವನ್ನು ಹಿಡಿದು ಕೊಂಡಾಗ, ಪ್ರೀತಿಯು ಪರಿಪೂರ್ಣವಾಗಿದೆಯೆಂದು ತೋರಬಹುದು. ಇನ್ನೊಬ್ಬರೊಂದಿಗೆ ಭಯಂಕರವಾದ ವಿಪತ್ತಿನ ಮುಖಾಂತರ ಶ್ರಮೆಯನ್ನು ಅನುಭವಿಸಿದಾಗ ಯಾವುದು ನಿಜವಾದ ಪ್ರೀತಿಯನ್ನುಂಟು ಮಾಡುತ್ತದೆಂಬುದನ್ನು ಕಂಡು ಕೊಂಡಿದ್ದೇ ವೆಂದು ನಾವು ಯೋಚಿಸುತ್ತೇವೆ. ಪ್ರೀತಿಯು ಯಾವಾಗಲೂ, ಪ್ರಾರಂಭವಾಗಿದೆಯೆಂಬಂತೆ ತೋರುತ್ತದೆ.

### ನಂಬಿಕೆಯು ಯಾವಾಗಲೂ ಪ್ರಾರಂಭವಾಗಿರುತ್ತದೆ (11:15)

ನಂಬಿಕೆಯು ಪ್ರೀತಿಯಂತೆಯೇ ಅದರಲ್ಲಿ ಯಾವಾಗಲೂ ಪ್ರಾರಂಭವಾಗಿರುತ್ತದೆ. ಉದಾಹರಣೆಗಾಗಿ, ಯೋಹಾನನ ಸುವಾರ್ತೆಯಲ್ಲಿ ಶಿಷ್ಯರು ಆಗಲೇ ನಾವು 11ನೆಯ ಅಧ್ಯಾಯವನ್ನು ತಲುಪುವ ಸಮಯದಲ್ಲಿ ಯೇಸುವಿನಲ್ಲಿ ನಂಬಿಕೆಗೆ ಬಂದಿದ್ದಾರೆ. ಯೇಸುವನ್ನು

ಹಿಂಬಾಲಿಸಲು ಸ್ನಾನಿಕನಾದ ಯೋಹಾನನನ್ನು ಬಿಟ್ಟಾಗ ಅಂದ್ರೇಯನು ನಂಬಿದನು (1:41), ಫಿಲಿಪ್ಪನನ್ನು ಯೇಸುವು ಕರೆದಾಗ ಅವನು ನಂಬಿದನು (1:45), ಅಂಜೂರದ ವೃಕ್ಷದ ಕೆಳಗೆ ಅವನನ್ನು ತಾನು ನೋಡಿದ್ದೇನೆಂದು ಯೇಸು ಹೇಳಿದಾಗ ನತಾನಯೇಲನು ನಂಬಿದನು (1:49). ಈ ಶಿಷ್ಯರು ಕಾನಾದಲ್ಲಿ ಮದುವೆಯ ಔತಣದಲ್ಲಿ ಭಾಗವಹಿಸಿದ್ದಾಗ, ಯೇಸುವು ನೀರನ್ನು ದ್ರಾಕ್ಷಾರಸವಾಗಿ ಮಾಡಿದ್ದನ್ನು ನೋಡಿದಾಗ ನಂಬಿದರು (2:11). ಪೇತ್ರ ಮತ್ತು ಇತರ ಶಿಷ್ಯರು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದಕ್ಕೆ ಸಾಕ್ಷಿಯಾದವರು ಮತ್ತು ಜೀವದ ರೊಟ್ಟಿಯ ಬಗ್ಗೆ ಬೋಧನೆಯನ್ನು ಕೇಳಿದವರು ಸಹ ನಂಬಿದರೆಂದು ನಮಗೆ ಹೇಳಲ್ಪಟ್ಟಿದೆ (6:69). ನಂಬಿಕೆಯ ಈ ಎಲ್ಲಾ ಹೇಳಿಕೆಗಳ ನಂತರವೂ, ಯೇಸುವು ತನ್ನ ಶಿಷ್ಯರಿಗೆ ಅವರು ನಂಬಲಿಕ್ಕಾಗುವಂತೆ ಲಾಜರನನ್ನು ಎಬ್ಬಿಸುವ ಅವಕಾಶಕ್ಕಾಗಿ ತಾನು ಸಂತೋಷವುಳ್ಳವನಾಗಿದ್ದೇನೆಂದು ಹೇಳಿದನು (11:15)!

ನಂಬಿಕೆಯು ಅದರಂತಿದೆ - ಯಾವಾಗಲೂ ಪ್ರಾರಂಭವಾಗಿರುತ್ತದೆ. ನಮ್ಮಲ್ಲಿ ಎಲ್ಲರೂ ಕೆಲವೊಂದು ಮಟ್ಟದಲ್ಲಿಯಾದರೂ ಆಗಲೇ ನಂಬಿದವರಾಗಿದ್ದೇವೆ. ಆಗ ಒಂದು ದಿನ, ನಂಬಿಕೆಯನ್ನು ಪುನಃ ಅದೇ ರೀತಿಯಲ್ಲಿ ಎಂದೂ ನೋಡದಂತೆ ಜೀವಿತ ಬದಲಾಯಿಸುವಂಥ ಸಂಗತಿಯನ್ನು ನಾವು ಎದುರಿಸುತ್ತೇವೆ. ಈ ಸಂದರ್ಶನವು ಒಂದು ಆಶೀರ್ವಾದವಾಗಿರಬಹುದು ಇಲ್ಲವೇ ಒಂದು ವಿಚಾರಣೆಯಾಗಿರಬಹುದು, ಒಂದು ಮಗುವಿನ ಜನನವಾಗಿರಬಹುದು ಅಥವಾ ಐವತ್ತು ಅಡಿ ಎತ್ತರದಿಂದ ಬೀಳುವುದಾಗಿರ ಬಹುದು. ಫಕ್ಕನೆ, ಪ್ರತಿಯೊಂದನ್ನು ಭಿನ್ನವಾಗಿ ನೋಡುವೆವು ಮತ್ತು ಅದು ನಂಬಕೆಯು ಪುನಃ ಪ್ರಾರಂಭವಾಗುವಂತೆ ತೋರುತ್ತದೆ!

ಇಂದು ಯೋಹಾನನ ಸುವಾರ್ತೆಯು ನಂಬುವದಕ್ಕೆ ನಮ್ಮನ್ನು ಕರೆಯುತ್ತದೆ (20:31). ನಮ್ಮಲ್ಲಿ ಅನೇಕರು ಆ ಕರೆಯನ್ನು ಕೇಳುವರು ಹಾಗೂ, ‘‘ನಾನು ಆಗಲೇ ನಂಬಿರುವೆನು’’ ಎಂದು ಯೋಚಿಸುವರು. ಹೀಗಿದ್ದರೂ, ನಾವು ಕೇಳಿದರೆ, ಹುಡುಕಿದರೆ ಮತ್ತು ಹಿಂಬಾಲಿಸಿದರೆ, ಆ ನಂಬಿಕೆಯು ನಮ್ಮಲ್ಲಿ ಕೇವಲ ಪ್ರಾರಂಭವಾಗಿದೆ ಎಂದು ಕೊಳ್ಳುತ್ತೇವೆ!

*“I'm Pressing on the Upward Way.”* ಇಂಥಹ ಬೆಳೆಯುತ್ತಿರುವ ವಿಶ್ವಾಸದ ಮೇಲಿನ ಸಂಗೀತ.

## ನಂಬಿಕೆಯು ವಾಗ್ದಾನದಿಂದ ತುಂಬಿಕೊಂಡಿದೆ (11:25, 26, 40)

ಮಾರ್ಥಳು ಬೇಥಾನ್ಯದ ಹೊರಗೆ ಯೇಸುವನ್ನು ಸಂದರ್ಶಿಸಿದಾಗ, ಆಕೆಯ ಸಹೋದರನು ಸಮಾಧಿಯಲ್ಲಿಡಲ್ಪಟ್ಟು ನಾಲ್ಕು ದಿನಗಳಾಗಿತ್ತು. ಯೇಸುವು ಅಲ್ಲಿದ್ದರೆ, ತನ್ನ ಸಹೋದರನು ಸಾಯುತ್ತಿರಲಿಲ್ಲ ಎಂದು ದುಃಖಿಸಿದಳು. ಆಕೆಯ ದುಃಖಕ್ಕೆ ಉತ್ತರವಾಗಿ ಯೇಸುವು “ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ; ಇದನ್ನು ನಂಬುತ್ತೀಯಾ?” ಎಂದು ಹೇಳಿದನು (11:25, 26). ಯೇಸುವಿನ ಮಾತುಗಳು ನಂಬಲಿಕ್ಕೆ ಒಂದು ಬಲವಾದ ಪ್ರೇರಣೆಯನ್ನು ಒದಗಿಸುತ್ತದೆ. ನಂಬಿಕೆಯು ಕಠಿಣವಾದ ಕೆಲಸ, ಮತ್ತು ಮೈಗಳ್ಳನಾದ ವ್ಯಕ್ತಿಯು ಪ್ರಯತ್ನ ಮಾಡುವುದೇ ಇಲ್ಲ. ನಾವು ನಂಬಲಿಕ್ಕೆ ಅಪೇಕ್ಷಿಸುವದರಿಂದ ಮಾತ್ರ ನಾವು ನಂಬುವದಿಲ್ಲ. ಆದರೆ ನಾವು ನಂಬಲಿಕ್ಕೆ ಬಯಸದಿದ್ದರೆ ನಾವು ಎಂದಿಗೂ ನಂಬುವದಿಲ್ಲ. ನಂಬಿಕೆಯು ಪ್ರತಿಷ್ಠಿಸುವಿಕೆಯನ್ನು, ವಿಧೇಯತೆಯನ್ನು, ತ್ಯಾಗವನ್ನು ಮತ್ತು ಕೆಲವು ಸಲ, ಕಣ್ಣೀರುಗಳನ್ನು ಒಳಗೊಂಡಿರುತ್ತದೆ. ಹೀಗಿದ್ದರೂ, ನಂಬುವ ಎಲ್ಲರಿಗೂ ಘನವಾದ ವಾಗ್ದನವು ಮಾಡಲ್ಪಟ್ಟಿದೆ.

ಈ ರೀತಿಯಲ್ಲಿ, ನಂಬಿಕೆಯು ಕಾಲೇಜಿನಲ್ಲಿಯ ಕಠಿಣ ಕೆಲಸದಂತಿರುತ್ತದೆ; ಒಳ್ಳೆ

ಉದ್ಯೋಗವನ್ನು ಪಡೆದು ಕೊಳ್ಳುವ ವಾಗ್ದಾನದ ಕಾರಣದಿಂದ ವಿದ್ಯಾರ್ಥಿಯು ಅದನ್ನು ಮಾಡುತ್ತಾನೆ. ಒಬ್ಬನ ಉದ್ಯೋಗದಲ್ಲಿ ಬಲವಾಗಿ ಕೆಲಸ ಮಾಡುವುದು ಒಳ್ಳೆ ಸಂಬಳ ಇಲ್ಲವೇ ಬಡತಿಯೊಂದಿಗೆ ಬಹುಮಾನಿಸಲ್ಪಡುತ್ತದೆ. ಇದರ ಬಗ್ಗೆ ತಪ್ಪು ಮಾಡಬೇಡಿರಿ: ನಂಬಿಕೆಯು ಒಂದು ಬಹುಮಾನವನ್ನು ಸಂಪಾದಿಸುವದಿಲ್ಲ ಆದರೆ ದೇವರ ವಾಗ್ದಾನಗಳು ದೀರ್ಘವಾದ, ಕಷ್ಟಕರವಾದ, ಕೆಲವು ಸಲ ಶ್ರಮೆಯಿಂದ ಕೂಡಿದ ನಂಬಿಕೆಯ ಮಾರ್ಗದಲ್ಲಿ ಮುಂದುವರಿಯಲು ನಮ್ಮನ್ನು ಪ್ರೇರಿಸುತ್ತವೆ.

*"My Faith Looks Up to Thee."* ಇಂಥಹ ವಿಶ್ವಾಸದ ಬಗೆಗಿನ ಸಂಗೀತ.

## ನಂಬಿಕೆಯು ಯೇಸುವಿನ ಮೇಲೆ ಕೇಂದ್ರೀಕರಿಸುತ್ತದೆ (11:27, 42)

ಯೋಹಾನನ ನಂಬಿಕೆಯು ಯೇಸುವಿನಲ್ಲಿ ನಂಬಿಕೆಯ ಕಡೆಗೆ ಚಲಿಸುತ್ತದೆ. ನಮಗೆ ಅಗತ್ಯವಾದದ್ದು ತಂದೆ ತಾಯಿಗಳಲ್ಲಿ ನಂಬಿಕೆ ಅಲ್ಲ, ಅಪೊಸ್ತಲರಲ್ಲಿ ನಂಬಿಕೆ ಅಲ್ಲ, ಇತರ ಕ್ರೈಸ್ತರಲ್ಲಿ ನಂಬಿಕೆ ಅಲ್ಲ, ಸಭೆಯಲ್ಲಿ ನಂಬಿಕೆ ಅಲ್ಲ, ನಂಬಿಕೆಯಲ್ಲಿ ನಂಬಿಕೆಯೂ ಅಲ್ಲ. ಆದರೆ ನಮಗೆ ಯೇಸುವಿನಲ್ಲಿ ನಂಬಿಕೆಯ ಅಗತ್ಯತೆಯಿದೆ.

ಮಾರ್ಥಳ ನಂಬಿಕೆಯ ಬಲವಾದ ಹೇಳಿಕೆಯಲ್ಲಿ ಆಕೆ ಯೇಸುವಿಗೆ, "... ಹೌದು ಸ್ವಾಮೀ, ಲೋಕಕ್ಕೆ ಬರಬೇಕಾದ ದೇವಕುಮಾರನಾದ ಕ್ರಿಸ್ತನು ನೀನೇ ಎಂದು ನಂಬಿದ್ದೇನೆ" ಎಂದು ಹೇಳಿದಳು (11:27). ಯೇಸು, ಆತನ ಶಿಷ್ಯರು, ಮಾರ್ಥಳು, ಮರಿಯಳು ಮತ್ತು ದುಃಖಿಸಲು ಬಂದ ಜನರ ಗುಂಪು ಅನಂತರದಲ್ಲಿ ಲಾಜರನ ಸಮಾಧಿಯ ಹೊರಗೆ ಕೂಡಿ ಬಂದಿದ್ದಾಗ, ಯೇಸುವು ಹೀಗೆ ಹೇಳಿ ತಂದೆಗೆ ಪ್ರಾರ್ಥಿಸಿದನು. "ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಆದರೂ ನೀನೇ ನನ್ನನ್ನು ಕಳುಹಿಸಿಕೊಟ್ಟಿ ಎಂದು ಸುತ್ತಲು ನಿಂತಿರುವ ಜನರು ನಂಬುವಂತೆ ಅವರಿಗೋಸ್ಕರ ಈ ಮಾತುಗಳನ್ನಾಡಿದನು" (11:42). ಇದು ಯೋಹಾನನ ಸುವಾರ್ತೆಯ ಉಳಿದ ಭಾಗದೊಂದಿಗೆ ಸಮಂಜಸವಾದದ್ದಾಗಿದೆ. ಅಲ್ಲಿ ಉದ್ದೇಶವು "ಯೇಸುವು ಕ್ರಿಸ್ತನಾಗಿದ್ದಾನೆ, ದೇವರ ಕುಮಾರನಾಗಿದ್ದಾನೆ" (20:31) ಎಂಬ ನಂಬಿಕೆಯನ್ನು ಉತ್ಪಾದಿಸುವುದಾಗಿರುತ್ತದೆ.

ಜಾನ್ ಪೇಟನ್ನನು ಆಫ್ರಿಕಾಕ್ಕೆ ಒಬ್ಬ ಮಿಶನರಿಯಾಗಿದ್ದನು. ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಬೋಧಿಸಿದನು ಮತ್ತು ಬಾಪ್ತಿಸ್ಮ ಮಾಡಿಸಿದನು. ಅವನು ಬೋಧಿಸುತ್ತಿದ್ದ ಜನರ ಭಾಷೆಯಲ್ಲಿ ಬೈಬಲ್ ಭಾಷಾಂತರದ ದೀರ್ಘವಾದ ಹಾಗೂ ಕಷ್ಟಕರವಾದ ಕಾರ್ಯವನ್ನು ಪ್ರಾರಂಭಿಸಿದನು. "ನಂಬು" ಎಂಬ ಪದವನ್ನು ಭಾಷಾಂತರಿಸಲು ಪ್ರಾರಂಭಿಸುವವರೆಗೆ ಕಾರ್ಯವು ಸರಳವಾಗಿ ನಡೆಯಿತು. ವಿಚಿತ್ರವಾಗಿ ತೋರುವಂತೆ ಈ ಭಾಷೆಯಲ್ಲಿ "ನಂಬು" ಎಂಬುದಕ್ಕಾಗಿ ಯಾವುದೇ ಪದವಿರಲಿಲ್ಲ. "ನಂಬು" ಎಂಬುದಕ್ಕೆ ಒಂದು ಪದವಿಲ್ಲದೆ ಒಬ್ಬನು ಬೈಬಲನ್ನು ಭಾಷಾಂತರಿಸುವದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಆಗ, ಒಂದು ದಿನ ಪೇಟನ್ನ್‌ನು ಈ ಭಾಷೆಯ ಸಮಸ್ಯೆಯ ಬಗ್ಗೆ ಹೋರಾಡುತ್ತಿದ್ದಾಗ, ಗ್ರಾಮದಿಂದ ಒಬ್ಬ ಕ್ರೈಸ್ತ ಮನುಷ್ಯನು ಅವನನ್ನು ಭೇಟಿಯಾಗಲೂ ಬಂದನು. ಈ ಮನುಷ್ಯನು ಇಡೀ ದಿನ ಕಠಿಣವಾಗಿ ಕೆಲಸಮಾಡಿ ದಣಿದವನಾಗಿದ್ದನು. ಅವನು ಒಂದು ಖುರ್ಚಿಯ ಮೇಲೆ ಕುಳಿತುಕೊಂಡಾಗ, ಉಪಶಮನ ದಣಿದ ನಿಟ್ಟುಸಿರು ಬಿಟ್ಟನು, ಮತ್ತು "ನಿನ್ನ ಇಡೀ ಭಾರವನ್ನು ಯಾವುದಾದರೊಂದರ ಮೇಲೆ ಆತುಕೊಳ್ಳುವುದು ಬಹಳಷ್ಟು ಒಳ್ಳೆಯದಾಗಿದೆ" ಎಂದು ಹೇಳಿದನು. "ನಂಬು" ಎಂಬುದಕ್ಕೆ ಒಂದು ವ್ಯಕ್ತಪಡಿಸುವಿಕೆಯನ್ನು ಕಂಡು ಕೊಂಡಿದ್ದೇನೆಂದು ಪೇಟನ್ ಅರಿತುಕೊಂಡನು. ನಂಬುವುದು ಅಂದರೆ "ನಿಮ್ಮ ಇಡೀ ಭಾರವನ್ನು ಯೇಸುವಿನ ಮೇಲೆ ಹಾಕುವುದು"[1] ಆಗಿರುತ್ತದೆ. ನಂಬಿಕೆಯು ಯೇಸುವಿನ ಮೇಲೆ ಕೇಂದ್ರೀಕರಿಸಲ್ಪಡುತ್ತದೆ.

*"I Believe in Jesus."* ಇಂಥಹ ನಂಬಿಕೆಯ ಬಗೆಗಿನ ಸಂಗೀತ.

## ನಂಬಿಕೆಯು ವಿಭಾಗಿಸುವಂಥದ್ದಾಗಿದೆ (11:45, 46)

ಜನರು ಲಾಜರನ ಸಮಾಧಿಯ ಹೊರಗೆ ನಿಂತಿರುವಂತೆ ಮತ್ತು ಅವನು ಜೀವಿತವಾಗಿ ಹೊರಗೆ ನಡೆದು ಬರುವದನ್ನು ನೋಡದಂತೆ, ಅವರು ತಪ್ಪಿಸಿಕೊಳ್ಳಲಾಗದ ಕವಲು ದಾರಿಯೊಂದಿಗೆ ಎದುರಿಸಲ್ಪಟ್ಟರು. ಲಾಜರನು ಸತ್ತು ಹೋಗಿದ್ದನ್ನು, ಹೂಣಿಡುವುಕೆಗಾಗಿ ಅವನನ್ನು ಸಿದ್ಧಪಡಿಸಿದ್ದನ್ನು ಒಂದು ಸಮಾಧಿಯಲ್ಲಿ ಅವನನ್ನು ಇಟ್ಟಿದ್ದನು ಮತ್ತು ಗವಿಯ ಬಾಗಿಲಿಗೆ ಕಲ್ಲನ್ನು ಇಟ್ಟಿದ್ದನ್ನು ಅವರು ನೋಡಿದ್ದರು. ಈ ಘಟನೆಗಳಿಗೆ ಅವರು ಪ್ರತ್ಯಕ್ಷದರ್ಶಿಗಳಾಗಿದ್ದರು. ಆಗ, ಯೇಸುವಿನ ಅದ್ಭುತಕಾರ್ಯದ ಕಾರಣದಿಂದ, ಇದೇ ಜನರು ಲಾಜರನ ಎಬ್ಬಿಸುವಿಕೆಗೆ ಸಾಕ್ಷಿಗಳಾದರು. ಅವರು ನಂಬಿದರೋ? ಒಂದು ತೀರ್ಮಾನವನ್ನು ಮಾಡಿಕೊಳ್ಳುವನ್ನು ಅವರು ತಪ್ಪಿಸಿಕೊಳ್ಳಲಿಕ್ಕಾಗಲಿಲ್ಲ.

ಆ ದಿನ ಅದ್ಭುತಕಾರ್ಯವನ್ನು ಗಮನಿಸಿದವರಲ್ಲಿ ವಿಭಜನೆಯಾದದ್ದನ್ನು ಯೋಹಾನನು ದಾಖಲೆ ಮಾಡಿದ್ದಾನೆ:

> ಮರಿಯಳ ಬಳಿಗೆ ಬಂದ ಯೆಹೂದ್ಯರು ಆತನು ಮಾಡಿದ ಕಾರ್ಯವನ್ನು ನೋಡಿದಾಗ ಅವರಲ್ಲಿ ಅನೇಕರು ಆತನನ್ನು ನಂಬಿದರು; ಆದರೆ ಕೆಲವರು ಫರಿಸಾಯರ ಬಳಿಗೆ ಹೋಗಿ ಯೇಸು ಮಾಡಿದ್ದನ್ನು ಅವರಿಗೆ ತಿಳಿಸಿದರು (11:45, 46).

ಈ ಎಲ್ಲಾ ಜನರು ಒಂದೇ ಘಟನೆಗಳನ್ನು ನೋಡಿದರು ಆದರೆ ವಿರುದ್ಧವಾದ ಮಾರ್ಗಗಳಲ್ಲಿ ಪ್ರತಿಕ್ರಿಯೆ ತೋರಿಸಿದ್ದು ಆಶ್ಚರ್ಯಕರವಾದದ್ದಾಗಿದೆ. ಕೆಲವರು ತಾವು ದೇವರ ಬಲದ ಸನ್ನಿಧಿಯಲ್ಲಿ ಇರುವದನ್ನು ನೋಡಿದರು, ಆದುದರಿಂದ ಅವರು ಆದಿನ ಯೇಸುವಿನಲ್ಲಿ ತಮ್ಮ ನಂಬಿಕೆಯನ್ನು ಇಟ್ಟರು. ಇತರರು ಗುಸುಗುಟ್ಟುವಿಕೆಯ ರಸಭರಿತ ತುಂಡನ್ನು ಮಾತ್ರ ನೋಡಿದರು ಮತ್ತು ಯೇಸುವಿನಿಂದ ಹುಟ್ಟಿದ ಗಲಿಬಿಲಿಯ ಬಗ್ಗೆ ಯೆಹೂದಿ ನಾಯಕರಿಗೆ ಹೇಳಲು ಯೆರೂಸಲೇಮಿಗೆ ಧಾವಿಸಿದರು. ಆ ದಿನದ ಜನರಲ್ಲಿಯ ವಿಭಜನೆಯು ಕಥೆಯ ಮಹತ್ವದ ಭಾಗವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ವಿಭಜನೆಯು ಯೇಸುವಿನ ಕಥೆಯ ಸ್ವಭಾವವೇ ಆಗಿದೆ: ಜನರು ಯೇಸುವಿನ ಬಗ್ಗೆ ಕೇಳುವಾಗ, ಆತನ ನಿಜವಾದ ಗುರುತಿಸುವಿಕೆಯ ಬಗ್ಗೆ ಒಂದಿಲ್ಲಾ ಒಂದು ರೀತಿಯಲ್ಲಿ ತೀರ್ಮಾನ ಮಾಡಲು ಒತ್ತಾಯಪಡಿಸುತ್ತಾರೆ. ಮಧ್ಯಮ ಮಾರ್ಗವಾಗಿರುವದಿಲ್ಲ.

ಯೇಸು ಮತ್ತು ಅಪೊಸ್ತಲ ಯೋಹಾನ ಇಬ್ಬರೂ ನಿರ್ಭಯವಾಗಿ ತೀರ್ಮಾನ ಮಾಡುವದರ ಕಡೆಗೆ ನಮ್ಮನ್ನು ದೂಡುತ್ತಾರೆ. ಯೇಸುವು ದೇವರ ಕುಮಾರನಾಗಿರುವನೋ ಇಲ್ಲವೇ ಆತನು ಒಬ್ಬ ಮೋಸಗಾರನಾಗಿರುವನೋ? ಆತನು ದೈವಿಕನಾಗಿರಬಹುದು ಇಲ್ಲವೇ ಮರಣಕ್ಕೆ ಅರ್ಹನಾದ ದೇವ ಧೂಷಕನಾಗಿರುವನೋ? ನಿನ್ನ ತೀರ್ಮಾನವೇನು?

"*I Have Decided to Follow Jesus.*" ಇಂಥಹ ಸಮರ್ಪಣೆ ಬಗೆಗಿನ ಸಂಗೀತ.

## ನಂಬಿಕೆಯು ಭಯಪಡಿಸುವಂಥದ್ದಾಗಿದೆ (11:48)

ಲಾಜರನು ಜೀವಿತನಾಗಿ ಎದ್ದು ಬಂದುದಕ್ಕೆ ಸಾಕ್ಷಿಗಳಾಗಿದ್ದವರಲ್ಲಿ ಕೆಲವರು ನಜರೇತಿನಿಂದ ಬಂದ ಬೋಧಕನು ಏನು ಮಾಡಿದ್ದಾನೆಂಬುದನ್ನು ಹೇಳಲು ಯೆರೂಸಲೇಮಿನಲ್ಲಿಯ ಮಹಾ ಯಾಜಕರ ಮತ್ತು ಫರಿಸಾಯರ ಬಳಿಗೆ ಹೋದರು. ಅವರು ತಮ್ಮ ವರದಿಯನ್ನು ಹೇಳಿದಾಗ, ಅವರು "ನಾವು ಅವನನ್ನು ಹೀಗೆಯೇ ಬಿಟ್ಟರೆ ಎಲ್ಲರೂ ಅವನನ್ನು ನಂಬಾರು; ಮತ್ತು ರೋಮ್ ರಾಜ್ಯದವರ ಬಂದು ನಮ್ಮ ಸ್ಥಾನವನ್ನೂ ಜನವನ್ನೂ ಸೆಳಕೊಂಡಾರು" ಅಂದರು (11:48). ಯೇಸುವಿನಲ್ಲಿ ನಂಬಿಕೆಯ ಜೀವಿತಗಳನ್ನು ಬದಲಾಯಿಸುವದು, ಕುಟುಂಬಗಳನ್ನು ಬದಲಾಯಿಸುವದು ಮತ್ತು ದೇಶವನ್ನೇ ಬದಲಾಯಿಸುವುದು ಎಂದು ಅವರು ಅರಿತು

ಕೊಂಡರು. ನಂಬಿಕೆಯು ಹೇಗೆ "ಗಂಡಾಂತರ ಕಾರಿಯಾದದ್ದಾಗಿದೆ" ಎಂಬುದನ್ನು ಅವರು ಇಂದಿನ ಹೆಚ್ಚಾದ ಕ್ರೈಸ್ತರಿಗಿಂತ ಬಹುಶಃ ಚೆನ್ನಾಗಿ ಅರಿತು ಕೊಂಡರು. ಒಂದು ಹಳೇ ಸಂಗೀತವು ಪ್ರೀತಿಯ ಬಗ್ಗೆ "ಅದು ನಿಮ್ಮನ್ನು ಮೇಲಕ್ಕೆತ್ತುವುದು, ಎಂದೂ ಕೆಳಗೆ ಹಾಕುವದಿಲ್ಲ, ನಿಮ್ಮ ಜಗತ್ತನ್ನು ತಗೆದು ಕೊಂಡು ಎಲ್ಲಾ ಕಡೆಗೂ ತಿರುಗಿಸುವುದು" ಎಂದು ಹೇಳುತ್ತದೆ. ಯೇಸುವಿನಲ್ಲಿ ನಂಬಿಕೆಯ ಬಗ್ಗೆ ಇದೇ ಹೇಳಲ್ಪಡತಕ್ಕದ್ದು.

ಇಂದಿನ ಧೋರಣೆಯು ನಂಬಿಕೆಯನ್ನು ಕುರಿತು ಬಹಳ ಅಲ್ಪವಾಗಿ ನಿರೀಕ್ಷಿಸುವದಾಗಿದೆ. ಅನೇಕ ಕ್ರೈಸ್ತರು ನಂಬಿಕೆಯನ್ನು ಬಹಳ ಸುಲಭವಾದದ್ದಾನ್ನಾಗಿ, ಮೃದುವಾದದ್ದನ್ನಾಗಿ, ಬಹಳವಾಗಿ ಕೇಳಿದಿರುವದನ್ನಾಗಿ ಮಾಡಿದ್ದಾರೆ. ವಿಲ್ಬರ್ ರೀಜ ಎಂಬುವನು ಈ ಧೋರಣೆಯನ್ನು ಈ ಕೆಳಗಿನ ವ್ಯಂಗ್ಯವಾದ ವಾಕ್ಯಭಾಗದಲ್ಲಿ ವ್ಯಕ್ತಪಡಿಸಿದ್ದಾನೆ:

> ಮೂರು ಡಾಲರ ಬೆಲೆಯ ದೇವರನ್ನು ಕೊಂಡು ಕೊಳ್ಳಲು ಬಯಸುತ್ತೇನೆ, ನನ್ನ ಪ್ರಾಣವನ್ನು ಸ್ಫೋಟಿಸಲು ಸಾಕಾಗದಷ್ಟು, ಇಲ್ಲವೇ ನನ್ನ ನಿದ್ರೆಯನ್ನು ಕೆಡದಷ್ಟು ಮತ್ತು ಒಂದು ಕಪ್ ಬಿಸಿ ಹಾಲಿಗೆ ಇಲ್ಲವೇ ಬಿಸಿಲಿನಲ್ಲಿ ಒಂದು ಪಾನೀಯಕ್ಕೆ ಸಮನಾದಷ್ಟು ಅದಿರಬೇಕು. ನಾನು ಕಪ್ಪು ಮನುಷ್ಯನನ್ನು ಪ್ರೀತಿಸುವಂತೆ ನನ್ನನ್ನು ಮಾಡಲು ಇಲ್ಲವೇ ವಲಸೆಗಾರನೊಂದಿಗೆ ಗೆಣಸನ್ನು ಕಿತ್ತುವಂತೆ ಮಾಡಲು ಆತನು ಸಾಕಷ್ಟಾಗಿ ಇರುವದನ್ನು ನಾನು ಬಯಸುವದಿಲ್ಲ; ನನಗೆ ಭಾವಾವೇಶ ಬೇಕು, ಮಾರ್ಪಡುವಿಕೆ ಬೇಡ; ಗರ್ಭದ ಹಿತೋಷ್ಣಬೇಕು ಆದರೆ ನೂತನ ಜನನ ಬೇಡ. ನಿತ್ಯತ್ವದ ಒಂದು ಪೌಂಡು ನನಗೆ ಕಾಗದದ ಚೀಲದಲ್ಲಿ ಬೇಕು. ಮೂರು ಡಾಲರ ಬೆಲೆಯ ದೇವರನ್ನು ನಾನು ಕೊಂಡು ಕೊಳ್ಳಲು ಬಯಸುತ್ತೇನೆ.[2]

ಯೇಸುವು ನಮ್ಮನ್ನು ಆಮಂತ್ರಿಸುವ ನಂಬಿಕೆಯು ನಮ್ಮ ಇಡೀ ಜೀವಿತಗಳನ್ನು ಬದಲಾಯಿಸಬಹುದು. ಯೇಸುವನ್ನು ಹಿಂಬಾಲಿಸುವಲ್ಲಿ ಒಳಗೊಂಡಿರುವ ಸಾಧ್ಯವಾದ ಬೆಲೆಗಳನ್ನು ನಾವು ತಿಳಿದುಕೊಳ್ಳುವಂತೆ ನಿಶ್ಚಿತತೆ ಮಾಡಲು ಯೋಹಾನನು ಬಯಸಿದ್ದನು. ನಾವು ಶ್ರಮೆಪಡಬಹುದು, ನಾವು ಹಿಂಸಿಸಲ್ಪಡಬಹುದು. ಮತ್ತು ನಮಗಿರುವ ಪ್ರತಿಯೊಂದನ್ನು ಕಳೆದುಕೊಳ್ಳಬಹುದು ನಂಬಿಕೆಯ ವಿಫುಲವಾದ ವಾಗ್ದಾನಗಳೊಂದಿಗೆ ಹೋಲಿಸುವಾಗ, ಬೆಲೆಗಳು ವಿಚಿತ್ರವಾಗಿ ಅಲ್ಪವಾಗಿ ತೋರುವವು!

*"Faith of Our Fathers."* ಇಂಥಹ ನಂಬಿಕೆಯನ್ನು ಸಹಿಸುವದರ ಬಗೆಗಿನ ಸಂಗೀತ.

---

ಟಿಪ್ಪಣೆಗಳು

[1]King Duncan, *"Faith," Dynamic Illustrations* (Knoxville, Tenn.: Seven Worlds Press, January/February 1995). [2]Quoted in Charles Swindoll, *Improving Your Serve* (Waco, Tex.: Word Publishing Co., 1981), 29.